## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

**ಸಿ.ಸಿ ನಂ:330/2021**

**ಪಿ.ಡಬ್ಲ್ಯೂ-2**
**ಸಿ.ಡಬ್ಲ್ಯೂ-5**

| | | |
|---|---|---|
| ಹೆಸರು | : | ದಿಲಿಪ ಗೊಳೊ ಸೋಲೆಕರ |
| ವಯಸ್ಸು | : | **43** ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ರಾಮನಗರ |

ದಿನಾಂಕ 04-09-2023 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ಸಾಕ್ಷಿದಾರರಿಗೆ ಈಗ ನಿ.ಪಿ.2 ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿದಾರರ ಸಹಿಯನ್ನು ನಿ.ಪಿ.2-ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2 ವರ್ಷಗಳ ಹಿಂದೆ ಖಾನಾಪುರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಅಘಾತವಾದ ಸಮಯದಲ್ಲಿ ಠಾಣೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಮಹಜರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಸಾಕ್ಷಿದಾರರು ನಿ.ಪಿ.3 ಪೋಟೋವನ್ನು ನೋಡಿ ಸದರಿ ಪೋಟೋವನ್ನು ಅಪಘಾತದ ಸ್ಥಳದಲ್ಲಿ ತೆಗೆದಿರುವ ಪೋಟೋಗಳೆಂದು ಗುರುತಿಸಿರುತ್ತಾರೆ.

ಸಾಕ್ಷಿದಾರರಿಗೆ ಈಗ ವಾಹನ ತಡೆ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.15 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.15-ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲೀಸರು ಅಪಘಾತವಾದ ಕಾರಣ ವಾಹನ ಅಮಾನತ್ ಪಡಿಸಿಕೊಂಡಿರುತ್ತೇವೆಂದು ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿದಾರರು ಈಗ ನಿ.ಪಿ.5 ಮತ್ತು 6 ಪೋಟೋಗಳನ್ನು ನೋಡಿ ಸದರಿ ಪೋಟೋಗಳನ್ನು ಪೋಲೀಸ್ ಠಾಣೆಯಲ್ಲಿ ತೆಗೆದಿರುತ್ತಾರೆಂದು ಗುರುತಿಸಿರುತ್ತಾರೆ.

*(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)*

<u>ಪಾಟೀ ಸವಾಲುಃ ಸಸಅ ರವರಿಂದ</u>

ದಿನಾಂಕ 10.12.2020 ರಂದು ಚಾ.ಸಾ.1 ರವರು ಅಪಘಾತ ಸ್ಥಳವನ್ನು ತೋರಿಸಿದ ಮೇರೆಗೆ ನನ್ನ ಸಮಕ್ಷಮ ಮಹಜರ ಬರೆದಿದ್ದು ನಿ.ಪಿ.3 ರ ಪ್ರಕಾರ ಫೋಟೋ ತೆಗೆದಿರುತ್ತಾರೆಂದರೆ ಸರಿ. ಆನಂತರ ನನ್ನನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಪಘಾತಕ್ಕೆಡಾದ ವಾಹನಗಳನ್ನು ಅಮಾನತ್ ಪಡಿಸಿಕೊಂಡು ಮಹಜರ ಬರೆದಿರುತ್ತಾರೆಂದರೆ ಸರಿ. ಆ ಸಮಯದಲ್ಲಿ ನಿ.ಪಿ.5 ಮತ್ತು 6 ರ ಪ್ರಕಾರ ಫೋಟೋಗಳನ್ನು ತೆಗೆದಿರುತ್ತಾರೆಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಸ್.ಎಸ್.ಎಂ ವಕೀಲರಿಂದ</u>

ನಾನು ಹತ್ತನೇಯ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನಾನು ಮರಾಠಿ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲವೆಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಬರಿ ಫೋಟೋ ಮಾತ್ರ ತೆಗೆದಿರುತ್ತಾರೆಂದರೆ ಸರಿ. ಪಂಚನಾಮೆ ಕನ್ನಡದಲ್ಲಿದ್ದು ಅದರಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರ ಬರೆಯಲು ನಾನೇನೂ ಮಾಹಿತಿ ನೀಡಿರುವುದಿಲ್ಲ. ಚಾ.ಸಾ.1 ನಮ್ಮ ಊರಿನವರೇ ಆದುದರಿಂದ ಅವರ ಮಾತು ಕೇಳಿಕೊಂಡು ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಮಹಜರಗೆ ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಮಹಜರಗೆ ಸಹಿ ಮಾಡಿದ್ದೇನೆಂದದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.